Allegations against the State Ministry

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಇನ್ನೊಂದು ಬಹಳ ಪ್ರಾಮುಖ್ಯವಾದ ವಿಷಯ ಎಂದರೆ ರಾಜ್ಯದ ಮುಖ್ಯ ಮಂತ್ರಿಗಳು ಈಗ ಸಭೆಯಲ್ಲಿಲ್ಲ. ಈ ಮಂತ್ರಿಮಂಡಲದ ಬಗ್ಗೆ ಇದ್ದ ಸಭೆಯ 43 ಜನ ಶಾಸಕರು ಒಂದು ಆಕ್ಷೇಪವನ್ನೆತ್ತಿ ದೂರನ್ನು ಕೊಟ್ಟಿದ್ದಾರೆ. ಅದುದರಿಂದ ಈ ಮಂತ್ರಿಮಂಡಲದಲ್ಲಿ ನಾಳೆ ಯಾರು ಉಳಿಯುತ್ತಾರೆ—ಯಾರು ಉಳಿಯುವುದಿಲ್ಲ ಎಂಬುದು ನಮಗೆ ತಿಳಿಯದಂತಾಗಿದೆ. ಇದು ನಮಗೂ ಕೂಡ ಬಹಳ ವ್ಯಥೆಯನ್ನುಂಟು ಮಾಡಿದೆ. ಇಲ್ಲಿನ ಶಾಸಕರು ಮಾನ್ಯ ಪ್ರಧಾನಿಯವರಿಗೂ ಕೂಡ ಒಂದು ದೊಡ್ಡ ಆರೋಪಣೆಯ ಪಟ್ಟಿಯನ್ನೇ ಕಳುಹಿಸಿದಾರೆ. ಅದರ ಬಗ್ಗೆ ಆಡಳಿತ ನಡೆಸುತ್ತಿರುವ ಮಂತ್ರಿಮಂಡಲದವರೂ ಕೂಡ ಒಂದು ವರದಿಯನ್ನು ಕೇಂದ್ರಕ್ಕೆ ಕಳುಹಿಸಿದ್ದಾರೆಂದು ಕೇಳುತ್ತಿದ್ದೇವೆ. ಆ ವಿಚಾರದಲ್ಲಿ ಮಾನ್ಯ ಉಪನಾಯಕರು...

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಸಚಿವರು).—ಈ ಮಂತ್ರಿಮಂಡಲದ ಅಸ್ತಿತ್ವದ ಬಗ್ಗೆ ತಮಗೇಕೆ ಇಷ್ಟು ಕಾತುರ ?

ಶ್ರೀ ಕೋಣಂಡೂರು ಲಂಗಪ್ಪ.—ಹಾಗಾದರೆ ಈಗಿರತಕ್ಕ ಮಂತ್ರಿಮಂಡಲಕ್ಕೂ ಶಾಸಕರಾದ ನಮಗೂ ಏನೂ ಸಂಬಂಧವೇ ಇಲ್ಲವೇ ? ದೇಶದ ಅಭಿವೃದ್ಧಿಯನ್ನು ನೀವು ನಿಮ್ಮ ಪಕ್ಷದ ತಿಕ್ಕಾಟದಲ್ಲಿ ಬಿದಿಗೊತ್ತಿ ಕುಳಿತಿದ್ದರೂ ನಾವು ಸುಮ್ಮನೆ ಕುಳಿತಿರಬೇಕೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ, ಪ್ರತಿನಿತ್ಯವೂ ನಿಮಗೆ ಇದೊಂದು ಸುಪ್ರಘಾತವಾಗಿದೆ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಿದ್ದವೀರಪ್ಪನವರೇ ಇದು ನಿಮ್ಮ ಪಕ್ಷದವರ ಮಾತಲ್ಲ. ಇದು ಆಡಳಿತಪಕ್ಷದ ವಿಚಾರ, ಇದರ ಬಗ್ಗೆ ನಮಗೇಕೆ ಇಷ್ಟು ಕಾತರ ಎಂದು ಹೇಳಬಹುದು ಆದರೆ...

ಶ್ರೀ ಕೋಣಂಡೂರು ಲಂಗಪ್ಪ.—ಮಾನ್ಯ ಸಿದ್ದವೀರಪ್ಪನವರೇ ಮುಂದಿನ ಮುಖ್ಯ ಮಂತ್ರಿಗಳಾಗಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆಂದು ನಾವೇಕೆ ಹೇಳಬಾರದು ?

ಶ್ರೀ ಎಚ್. ಸಿದ್ದವೀರಪ್ಪ.—ನೀವು ಏನೇ ಹೇಳಿದರೂ, ಹಾಲಿ ಇರತಕ್ಕ ಮುಖ್ಯಮಂತ್ರಿಗಳೇ ಮುಂದೆಯೂ ಇರುತ್ತಾರೆ. ಇದನ್ನು ಬದಲಾಯಿಸುವುದಕ್ಕೆ ಯಾರೂ ಒಪ್ಪುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದು ನಿಮ್ಮ ಪಕ್ಷದ ಪ್ರಶ್ನೆ ಅದಕ್ಕೆ ನಾವು ಅಡ್ಡಬರುವುದಿಲ್ಲ. ಆದರೆ ನಾವು ಕೇಳುತ್ತಿರುವುದು ಈ ರಾಜ್ಯದ ಪಾರ್ಲಮೆಂಟಿನ ಸದಸ್ಯರು ಮಾನ್ಯ ಪ್ರಧಾನಿಯವರಿಗೆ ಸಲ್ಲಿಸಿರುವ ದೂರುಗಳು ಮತ್ತು ಇದೇ ಸಭೆಯ 43 ಜನ ಶಾಸಕರು ಇಲ್ಲಿನ ಮಂತ್ರಿಮಂಡಲದಲ್ಲಿರುವ ಕೆಲವು ಮಂತ್ರಿಗಳ ಲಂಚಕೋರತನ ಮತ್ತು ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇತ್ಯಾದಿ ಅಪಾದನೆಗಳನ್ನು ಮಾಡಿ ಒಂದು ದೊಡ್ಡ ಅಪಾದನೆಗಳ ಪಟ್ಟಿಯನ್ನೆ ಕೊಟ್ಟಿದ್ದಾರೆ. ಇದು ಇಡೀ ದೇಶಕ್ಕೆ ಸಂಬಂಧಪಟ್ಟ ವಿಷಯ. ಈ ದೃಷ್ಟಿಯಿಂದ ಈ ವಿಚಾರದಲ್ಲಿ ಈ ಮಾನ್ಯ ಸಭೆಗೆ ಮಾನ್ಯ ನಾಯಕರು ಇಲ್ಲವೇ ಉಪನಾಯಕರು ಒಂದು ಸ್ಟೇಟ್‌ಮೆಂಟನ್ನು ಮಾಡಬೇಕಾದ್ದು ಅಗತ್ಯ ಎಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೇ...

ಅಧ್ಯಕ್ಷರು.—ಏನು ಸಭೆಯಲ್ಲಿ ತಾವು, ತಪ್ಪಿದರೆ ಶ್ರೀ ಬಂಗಾರಪ್ಪನವರು ಇಬ್ಬರೇನೋ ಇರುವುದು ? ನಾವು ಇನ್ನು ಮುಂದೆ ಅಗತ್ಯವಾಗಿ ಯಾವ ಕೆಲಸವನ್ನು ಮಾಡಬೇಕು ಅದರ ಕಡೆಗೆ ಗಮನಕೊಡದೆ ಬರೀ ಈ ವಿಚಾರಗಳಲ್ಲೇ ಕಾಲ ಹರಣಮಾಡುತ್ತಾ ಕುಳಿತರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್.—ತಾವು ಹೇಳುತ್ತಿರುವುದೂ ಒಳ್ಳೆಯದೆ. ಈ ದಿವಸ ಮಾನ್ಯ ಎಸ್.ಎಂ. ಕೃಷ್ಣಾ ಅವರ ಡಿಮ್ಯಾಂಡ್ ಇದೆ. ಆದರೆ ನಾಳೆ ಅವರು ಮಂತ್ರಿಮಂಡಲದಲ್ಲಿ ಇಲ್ಲದಿದ್ದರೆ ಏನು ಮಾಡುವುದು ? ಮೊನ್ನೆ ತಾನೆ ನಮ್ಮ ವ್ಯವಸಾಯ ಮಂತ್ರಿಗಳಾದ ಶ್ರೀ ಕೆ.ಎಚ್. ಪಾಟೀಲರು ಬೇರೆ ಡೆಲ್ಲಿಗೆ ಹೋಗಿ ಪ್ರಧಾನಿಯವರನ್ನು ಕಂಡು ಮಾತನಾಡಿಕೊಂಡು ಬಂದಿರುತ್ತಾರೆ. ಇವರು ಅಲ್ಲಿ ಪ್ರಧಾನಿಯವರಿಗೆ ನಮ್ಮ ರಾಜ್ಯದ ಮಂತ್ರಿ ಮಂಡಲದ ಬಗ್ಗೆ ಏನೂ ಹೇಳಿದರೆಂಬುದು ತಿಳಿಯದು. ಈ ಮಂತ್ರಿಮಂಡಲ ಉಳಿಯುತ್ತದೋ ಇಲ್ಲವೋ ಎಂಬ ಸಂಶಯದಿಂದ ಅಧಿಕಾರಿಗಳು ಯಾರೂ ಈ ಮಂತ್ರಿಮಂಡಲದ ಅಜ್ಞೆಗಳನ್ನು ಕಾರ್ಯಗತ ಮಾಡುತ್ತಿಲ್ಲ. ಆದರೆ ಶ್ರೀಮಾನ್ ಚನ್ನಬಸಪ್ಪನವರು ಈ ವಿಚಾರದಲ್ಲಿ ಏಕೆ ಒಂದು ಹೇಳಿಕೆಯನ್ನು ಈ ಸಭೆಗೆ ಕೊಡಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಷಯದ ಬಗ್ಗೆ ಮಾನ್ಯ ಸದಸ್ಯರು ಅಷ್ಟು ಉದ್ವೇಗದಿಂದ ಮಾತನಾಡಬೇಕಾದುದು ಅನಗತ್ಯ. ಈ ಸಭೆಗೆ ಸರ್ಕಾರದ ಹಾಗೂ ಸರ್ಕಾರ ನಡೆಸುತಕ್ಕ ಕಾರ್ಯಕಲಾಪಗಳ ಬಗ್ಗೆ ಚರ್ಚೆ ಮಾಡಿ ಸಲಹೆಗಳನ್ನು ಮಾಡುವುದಕ್ಕೆ ಸರ್ವ ಅಧಿಕಾರವೂ ಇದೆ. ಈ ಸರ್ಕಾರ ಅಸ್ತಿತ್ವದಲ್ಲಿ ಇಲ್ಲದಿದ್ದರೆ ಇನ್ನೊಂದು ಸರ್ಕಾರ ಅಸ್ತಿತ್ವಕ್ಕೆ ಬರುತ್ತದೆ. ಸರ್ಕಾರ ನಡೆಸುತ್ತಿರುವ ಕೆಲಸ ಕಾರ್ಯಗಳ ಬಗ್ಗೆ ಟೀಕೆಟಿಪ್ಪಣಿಗಳನ್ನು ಮಾಡುವುದಕ್ಕೆ ಹಾಗೂ ಉತ್ತಮ ಸಲಹೆಗಳನ್ನು ಕೊಡುವುದಕ್ಕೆ, ವಿಧಿನಿಯಮಗಳ ಪ್ರಕಾರ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಮಾನ್ಯ ಸದಸ್ಯರುಗಳಿಗೆ ಎಲ್ಲ ಅಧಿಕಾರವೂ ಇದೆ. ಇನ್ನು ಸರ್ಕಾರದ ಲೋಪದೋಷಗಳ ಬಗ್ಗೆ ಆಕ್ಷೇಪಣೆಗಳ ಬಗ್ಗೆ ಚರ್ಚೆ ಮಾಡುವುದಕ್ಕೂ ಅವಕಾಶವಿದೆ. ಆದರೆ ಅಂಥ ಪ್ರತಿಯೊಂದು ವಿಚಾರಕ್ಕೂ ಸರ್ಕಾರ ಉತ್ತರವನ್ನು ಕೊಚ್ಚೇ ಕೊಡಬೇಕು. ಆದರೆ ಮಾನ್ಯ ಸದಸ್ಯರಲ್ಲಿ ಅಂಥ ಯಾವುದಾದರೂ ಲೋಪದೋಷಗಳ ಪಟ್ಟಿ ಇದ್ದರೆ ಅದನ್ನು ಅವರು ವಿಧಿನಿಯಮಗಳ ಪ್ರಕಾರ ಇಲ್ಲಿ ಚರ್ಚೆ ಮಾಡಬಹುದೇ ಶಿವಾಯಿ ಅದನ್ನು ಬಿಟ್ಟು. ಆ ಪತ್ರಿಕೆಯಲ್ಲಿ ಹಾಗೆ ಹೇಳಿದೆ, ಈ ಪತ್ರಿಕೆಯಲ್ಲಿ ಹೀಗೆ ಹೇಳಿದೆ ಎಂದು ಅದರ ಆಧಾರದ ಮೇಲೆ ಚರ್ಚೆಮಾಡುವುದು ತರವಾದುದಲ್ಲ ಅನ್ನುವುದು ನನ್ನ ಅಭಿಪ್ರಾಯ. ಆಪಾದನೆಗಳು ಮಾನ್ಯ ಸದಸ್ಯರ ಹಸ್ತಗತವಾಗಿದ್ದರೆ ಆ ವಿಷಯ ಬೇರೆ ಆಯಿತು. ಆದರೆ ಇಲ್ಲ ಹಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕಾನೂನು ಪ್ರಕಾರ ಸಭೆಯ ಮುಂದೆ ವಿಷಯಗಳನ್ನು ತಂದು ಇಲ್ಲಿ ಚರ್ಚೆ ಮಾಡಬೇಕು ಅನ್ನುವುದಕ್ಕೆ ಈಗ ಉದ್ಭವವಾಗಿರತಕ್ಕ ಪರಿಸ್ಥಿತಿಯಲ್ಲಿ ಇವರ ಈ ರೂಲ್ಸ್ ಚಪ್ ಪ್ರೊಸೀಜರ್ ಇವೆಲ್ಲಾ ಮಿಾರಿಹೋಗಿವೆ. ಈ ದಿವಸ ಮಂತ್ರಿ ಮಂಡಲದ ಬಗ್ಗೆ ಭ್ರಷ್ಟಾಚಾರದ ಬಗ್ಗೆ ಆಪಾದನೆಗಳು ಬಂದಿರುವಾಗ ಇಲ್ಲಿ ಈ ದಿವಸ ಮಂತ್ರಿಗಳಾದರೂ ಕುಳಿತು ಕೆಲಸ ಆಡುವುದಕ್ಕೆ ಅಧಿಕಾರವಿಲ್ಲ. ಇದು ಬಹಳ ಗಹನವಾದ ವಿಚಾರವಲ್ಲವೆ ಮತ್ತೇನು? ಈ ವಿಷಯುಗಳನ್ನು ಯಾರೋ ಬೀದಿಯಲ್ಲಿ ಹೋಗತಕ್ಕವರು ಹೇಳಿದ್ದು ಎಂದಿದ್ದರೆ ಕೈಬಿಡಬಹುದಾಗಿತ್ತು. ಆದರೆ ಈ ಆಪಾದನೆಗಳನ್ನು ಮಾಡಿರತಕ್ಕವರು ಯಾರು? ನಮ್ಮ ಎಂ.ಪಿ.ಗಳು ಮತ್ತು ನಮ್ಮ ಶಾಸಕರು. ಅಲ್ಲವೆ ಇಲ್ಲ 43 ಜನ ಎಂ.ಎಲ್.ಎ ಗಳ ಗುಂಪೊಂದು ಈ ನಾಯಕರು ಮಾತ್ರ ಇರಲ, ಮಂತ್ರಿಮಂಡಲ ಮತ್ತೆ ಬದಲಾಗಬೇಕು ಎನ್ನುತ್ತಿದ್ದರೆ ಇನ್ನೊಂದು 26 ಜನ ಶಾಸಕರ ಗುಂಪು ಶ್ರೀ ಕೆ. ಹನುಮಂತಯ್ಯನವರನ್ನು ಮುಖ್ಯಮಂತ್ರಿಗಳನ್ನಾಗಿ ತರಬೇಕೆಂದು ಹೇಳುತ್ತಿದ್ದಾರೆ, ಇನ್ನೊಂದು ಪಾರ್ಟಿ ಇನ್ನೊಂದು ರೀತಿ ಬದಲಾವಣೆ ಆಗಬೇಕೆಂದು ಹೇಳುತ್ತಿದ್ದಾರೆಂದು ನಾವು ಏನೇನೋ ವರ್ತಮಾನ ಕೇಳುತ್ತಿದ್ದೇವೆ. ಈ ವಿಚಾರದಲ್ಲಿ ಸರ್ಕಾರದವರು ಒಂದು ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕಾದುದು ಅಗತ್ಯ ಎಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸರ್ಕಾರ ಭದ್ರವಾದ ತಳಹದಿಯ ಮೇಲಿದೆ. ಇದರ ಬಗ್ಗೆ ಯಾರೂ ಕಾಳಜಿಪಡಬೇಕಾಗಿಲ್ಲ. ಈ ಸರಕಾರ ಭದ್ರವಾದ ತಳಹದಿಯ ಮೇಲಿದೆ. ಈ ಸಭೆಯ ಕಾಲ ಅಮೂಲ್ಯವಾದುದು. ಮುಖ್ಯವಾದ ವಿಷಯವನ್ನು ಪ್ರಸ್ತಾಪಿಸಲು ಕಾಲವನ್ನು ವಿನಿಯೋಗಿಸಬೇಕು ಎಂದು ಎಲ್ಲ ಮಾನ್ಯ ಸದಸ್ಯರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ. ಮಂತ್ರಿಮಂಡಲದ ಭದ್ರತೆ ವಿಷಯದಲ್ಲಿ ಯಾರೂ ಸಂಶಯ ಪಡಬೇಕಾಗಿಲ್ಲ. ಅದು ಭದ್ರವಾಗಿದೆ. ಒಂದು ವೇಳೆ ಭದ್ರವಾಗಿಲ್ಲವೆಂಬ ಸಂದೇಹವಿದ್ದರೆ ವೋಷನ್ ತೆಗೆದುಕೊಂಡು ಬನ್ನಿ.

ಶ್ರೀ ಪಾಟಾಳ್ ನಾಗರಾಜ್.—ಸಭೆಯನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ನನಗೆ ತಿಳಿದಮಟ್ಟಿಗೆ ಭದ್ರವಾಗಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ರೂಲ್ಸ್ ಪ್ರಕಾರ ವಿಧಿನಿಯಮಗಳಿಗನುಗುಣವಾಗಿ ಭದ್ರತೆ ಪರೀಕ್ಷೆ ಮಾಡಲು ಅವಕಾಶವಿದೆ. ಹಾಗೇಕೆ ಮಾಡಬಾರದು? ಆದು ಬಿಟ್ಟು ಭದ್ರವಾಗಿಲ್ಲವೆಂದರೆ ಅರ್ಥವೇನು?

ಶ್ರೀ ಕೋಣಂದೂರು ಲಿಂಗಪ್ಪ.—ಪಕ್ಷದೊಳಗೇನು ನಡೆಯುವುದೆಂಬುದನ್ನು ನಮಗೆ ತಿಳಿಯಲು ಅವಕಾಶವಿರುವುದು ಪತ್ರಿಕೆಗಳಿಂದ. ಅನುಮಾನ ಬಂದಿರುವುದರಿಂದ ನಾವು ಕೇಳಿ ತಿಳಿಯಬೇಕಾಗಿದೆ.